# ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಯಲಿಯೂರು ದಂಡಿಗನಹಳ್ಳಿ ಹೋ॥ ಚನ್ನರಾಯಪಟ್ಟಣ ತಾ॥ ಹಾಸನ ಜಿಲ್ಲೆ.





ಯಲಿಯೂರು ಎಂಬ ಹೆಸರು ಬರಲು ಕಾರಣ ಹಿಂದೆ ಈ ಗ್ರಾಮವನ್ನು ಯಲ್ಲಪ್ಪ ನಾಯಕನೆಂಬ ಪಾಳೇಗಾರನು ಆಳುತ್ತಿದ್ದರಿಂದ ಈ ಗ್ರಾಮಕ್ಕೆ ಯಲಿಯೂರು ಎಂದು ಹೆಸರು ಬಂದಿತ್ತು.

ಈ ಶಾಲೆ ಸ್ವಾತಂತ್ರ್ಯಪೂರ್ವದಲ್ಲಿ ಪ್ರಾರಂಭವಾಗಿದ್ದು, ಶಾಲಾ ದಾಖಲೆಗಳ ಪ್ರಕಾರ 1928 ನೇ ಇಸವಿಯಲ್ಲಿ ಪ್ರಾರಂಭವಾಗಿದೆ. ಈ ಶಾಲೆ 2 ಅಂತಸ್ತಿನ ಕಟ್ಟಡವಾಗಿದ್ದು, ಈ ಕಟ್ಟಡದಲ್ಲಿ 7 ಕೊಠಡಿಗಳಿದ್ದು, ಇದರ ಪಕ್ಕದ ಕಟ್ಟಡದಲ್ಲಿ 2 ಕೊಠಡಿಗಳಿರುತ್ತದೆ. ಈ ಕೊಠಡಿಗಳ ವಿಸ್ತೀರ್ಣ 17ಮೀ*30ಮೀ ಇರುತ್ತದೆ. ಶಾಲಾ ಮುಂಭಾಗದಲ್ಲಿರುವ ಆಟದ ಮೈದಾನ 42 ಮೀ*35 ಮೀ ಒಟ್ಟು 1470 ಚ.ಮೀ.ಇದೆ. ಈ ಶಾಲೆಯಲ್ಲಿ 1 ರಿಂದ 7 ನೇ ತರಗತಿ ನಡೆಯುತ್ತಿದ್ದು, 5 ಜನ ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಶಾಲೆಯ ಸುತ್ತ ಪರಿಸರ ತುಂಬಾ ಸೊಗಸಾಗಿದ್ದು, ಸುಮಾರು 8 ವರ್ಷದ ಮೇಲ್ಪಟ್ಟ 150 ಬೆಲೆಬಾಳುವ ಗಿಡಗಳು ಅಂದರೆ (ತೇಗ ಮತ್ತು ಸಿಲ್ವರ್ ) ಗಿಡಗಳು ಶಾಲಾ ಸೌಂದರ್ಯವನ್ನು ಹೆಚ್ಚಿಸಿವೆ. ಪ್ರವೇಶ ದ್ವಾರ ಹಾಗೂ ಮುಂಭಾಗದಲ್ಲಿ ಆಕರ್ಷಣೀಯ ಅಶೋಕ ಗಿಡಗಳು ಶಾಲಾ ಸೌಂದರ್ಯಕ್ಕೆ ಕೈಗನ್ನಡಿಯಾಗಿವೆ.

ಶಾಲಾ ಆವರಣದಲ್ಲಿ 15 ತೆಂಗಿನ ಗಿಡಗಳು ಇದ್ದು, ಕೆಲವು ಸಸಿಗಳು ಫಸಲು ಬಿಡುತ್ತಿದ್ದು, ಅವುಗಳನ್ನು ಅಕ್ಷರ ದಾಸೋಹಕ್ಕೆ ಬಳಸಲಾಗುತ್ತಿದೆ. ಶಾಲಾ ಆವರಣದಲ್ಲಿ ರಂಗಮಂದಿರವಿದ್ದು, ಮಕ್ಕಳ ಸಾಂಸ್ಕೃತಿಕ ಚಟುವಟಿಕೆಗಳಿಗೆ ಅನುಕೂಲವಾಗಿದೆ.

ಶಾಲಾ ಆವರಣದಲ್ಲಿ 2 ಕಡೆ ಕಾಂಪೌಂಡ್ ಇದ್ದು, ಪ್ರವೇಶದ್ವಾರದಲ್ಲಿ ಹೆವಿಗೇಜ್ ಇರುವ 20 ಅಡಿ ಅಗಲ 8 ಅಡಿ ಎತ್ತರದ ಗೇಟ್ ಹೊಂದಿದ್ದು, ಅದಕ್ಕೆ ಹೊಂದಿಕೊಂಡಂತೆ ಶಾಲಾ ಫಲಕದ ಆರ್ಚ್ ಅನ್ನು ಮಾಡಿಸಲಾಗಿದೆ.